ಕರ್ನಾಟಕ ಸರ್ಕಾರ

ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು

ಸಂಖ್ಯೆ ಇ-ಆಡಳಿತ / 2012-13

ನಿರ್ದೇಶಕರು,

ಡಿ.ಎಸ್.ಇ.ಆರ್.ಟಿ,

ಬೆಂಗಳೂರು.

ದಿನಾಂಕ: 25-07-2014

ಮಾನ್ಯರೇ,

ವಿಷಯ: ಶಿಕ್ಷಣ ವಾಹಿನಿ ತಂತ್ರಾಂಶದಲ್ಲಿ ಸಕಾಲ ಸೇವೆಗಳನ್ನು ಉಪಯೋಗಿಸಲು ಡಯಟ್ ಹಾಗೂ ಸಿಟಿಇ ಕಛೇರಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿಗಳು ಹಾಗೂ ಸಿಬ್ಬಂದಿಗಳ ಸೇವಾ ವಿವರಗಳನ್ನು ಅಳವಡಿಸುವ ಬಗ್ಗೆ.

ಉಲ್ಲೇಖ: ಈ ಕಛೇರಿಯ ಸಮ ಸಂಖ್ಯೆ ದಿನಾಂಕ: 25-03-2014

ಉಲ್ಲೇಖಿತ ಈ ಕಛೇರಿಯ ಪತ್ರದಲ್ಲಿ ಪ್ರಸ್ತಾಪಿಸಿದಂತೆ, ರಾಜ್ಯದ ಎಲ್ಲಾ ಡಯಟ್ ಹಾಗೂ ಸಿಟಿಇ ಕಛೇರಿಗಳಲ್ಲಿ ಸಕಾಲ ಸೇವೆಗಳನ್ನು ನೀಡಲು ಶಿಕ್ಷಣವಾಹಿನಿ ತಂತ್ರಾಂಶದ ಮೂಲಕ ಕಾರ್ಯನಿರ್ವಹಣೆಯನ್ನು ಮಾಡಬೇಕಾಗಿದ್ದು, ಸದರಿ ಕಛೇರಿಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅಧಿಕಾರಿಗಳು ಹಾಗೂ ಸಿಬ್ಬಂದಿಗಳ ಸೇವಾ ವಿವರಗಳನ್ನು ಶಿಕ್ಷಣವಾಹಿನಿ ತಂತ್ರಾಂಶದಲ್ಲಿ ಅಳವಡಿಸಲು ಸೂಚಿಸಲಾಗಿದ್ದು, ಈಗಾಗಲೇ ನಿಮ್ಮ ಕಛೇರಿಯ ಸಂಬಂದಪಟ್ಟವರಿಗೆ ತರಬೇತಿಯನ್ನು ನೀಡಲಾಗಿದೆ.

ಈ ವಿಷಯಕ್ಕೆ ಸಂಬಂದಪಟ್ಟಂತೆ ರಾಜ್ಯದ ಎಲ್ಲಾ ಡಯಟ್ ಹಾಗೂ ಸಿಟಿಇ ಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅಧಿಕಾರಿಗಳ ಹಾಗೂ ಸಿಬ್ಬಂದಿಗಳ ಸೇವಾ ವಿವರಗಳನ್ನು ಪಡೆದು ಕೂಡಲೇ ಶಿಕ್ಷಣವಾಹಿನಿ ತಂತ್ರಾಂಶದಲ್ಲಿ ಅಳವಡಿಸಲು ಹಾಗೂ ಸಕಾಲ ಸೇವೆಗಳ ಬಗ್ಗೆ ಸ್ವೀಕರಿಸುವ ಎಲ್ಲಾ ಅರ್ಜಿಗಳನ್ನು ಶಿಕ್ಷಣವಾಹಿನಿ ತಂತ್ರಾಂಶಗಳ ಮೂಲಕ ನೊಂದಾಯಿಸಿಕೊಂಡು, ನಿಯಮಾನುಸಾರ ಮುಂದಿನ ಕ್ರಮವಹಿಸಲು ಎಲ್ಲಾ ಡಯಟ್ ಹಾಗೂ ಸಿಟಿಇಗಳಿಗೆ ನಿರ್ದೇಶನವನ್ನು ಉಲ್ಲೇಖಿತ ಪತ್ರದಲ್ಲಿ ಈಗಾಗಲೇ ನೀಡಲು ಸೂಚಿಸಲಾಗಿತ್ತು.

ಆದರೆ ಶಿಕ್ಷಣವಾಹಿನಿ ತಂತ್ರಾಂಶದ ದತ್ತಾಂಶವನ್ನು ಪರಿಶೀಲಿಸಲಾಗಿ, ರಾಜ್ಯದ ಎಲ್ಲಾ ಡಯಟ್ ಹಾಗೂ ಸಿಟಿಇ ಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅಧಿಕಾರಿಗಳ ಹಾಗೂ ಸಿಬ್ಬಂದಿಗಳ ಸೇವಾ ವಿವರಗಳನ್ನು ಅಳವಡಿಸದೇ ಇರುವುದನ್ನು ಗಮನಿಸಲಾಗಿದೆ. ಆದ್ದರಿಂದ ಆಗಸ್ಟ್ 01 2014 ರೊಳಗೆ ಎಲ್ಲಾ ಮಾಹಿತಿಗಳನ್ನು ಶಿಕ್ಷಣವಾಹಿನಿ ತಂತ್ರಾಂಶದಲ್ಲಿ ಅಳವಡಿಸಲು ಕೂಡಲೇ ಕ್ರಮವಹಿಸುವುದು. ಈಗಾಗಲೇ ಡಯಟ್‌ನಲ್ಲಿ ಕಾರ್ಯನಿರ್ವಹಿಸುತ್ತಿರುವ 02 ಹಿರಿಯ ಉಪನ್ಯಾಸಕರುಗಳನ್ನು ಶಿಕ್ಷಣವಾಹಿನಿ ಸಂಪನ್ಮೂಲ ವ್ಯಕ್ತಿಯಾಗಿ ಆಯ್ಕೆ ಮಾಡಿಕೊಂಡು ತರಬೇತಿಯನ್ನು ದಿನಾಂಕ: 03-03-2014 ರಿಂದ 07-03-2014 ರವರೆಗೆ ನೀಡಲಾಗಿದ್ದು, ಸದರಿಯವರು ಡಯಟ್‌ನಲ್ಲಿ ಕಾರ್ಯನಿರ್ವಹಿಸುವ ಉಳಿದ ಅಧಿಕಾರಿ/ಸಿಬ್ಬಂದಿಗಳಿಗೂ ತರಬೇತಿಯನ್ನು ನೀಡಲು ಕ್ರಮವಹಿಸುವುದು. ಡಯಟ್ ಹಾಗು ಸಿಟಿಇ ಗಳಲ್ಲಿ ಶಿಕ್ಷಣವಾಹಿನಿ ತಂತ್ರಾಂಶದ ಮೂಲಕ ಪತ್ರ/ಕಡತಗಳ ಚಲನವಲನಗಳನ್ನು ಮಾಡುವಂತೆ ತಿಳಿಸಿ ರಾಜ್ಯದ ಎಲ್ಲಾ ಸಿಟಿಇ ಮತ್ತು ಡಯಟ್‌ಗಳಲ್ಲಿ ಶಿಕ್ಷಣವಾಹಿನಿ ಅನುಷ್ಠಾನಗೊಳಿಸಲು ಕೂಡಲೇ ಕ್ರಮವಹಿಸಿ ಈ ಕಛೇರಿಗೆ ವರದಿಯನ್ನು ತಪ್ಪದೇ ಸಲ್ಲಿಸಲು ಈ ಮೂಲಕ ಕೋರಿದೆ.

ತಮ್ಮ ನಂಬುಗೆಯ

ಅಪರ ಆಯುಕ್ತರು (ಆಡಳಿತ) (ಪ್ರಭಾರಿ)
ಇ-ಆಡಳಿತ ಘಟಕದ ನೋಡಲ್ ಅಧಿಕಾರಿಗಳು

ಪ್ರತಿಯನ್ನು

ರಾಜ್ಯದ ಎಲ್ಲಾ ಸಿಟಿಇ ಹಾಗೂ ಡಯಟ್ ಪ್ರಾಂಶುಪಾಲರುಗಳಿಗೆ ಮಾಹಿತಿಗಾಗಿ ಹಾಗೂ ಸೂಕ್ತಕ್ರಮ್ಮಕಾಗಿ.